ಸುಧಾ

‘ಆಫ್ರಿಕಾದ ಉದ್ಯಾನ’ ಎಂದು ಕರೆಸಿಕೊಳ್ಳುವ ‘ಜಾರ್ಡಿನ್ ಡಿ’ಆಫ್ರಿಕಾ’ ಹೆಸರಿನ ಈ ಸ್ಮಶಾನ ಇರುವುದು ದಕ್ಷಿಣ ಟ್ಯುನೀಷಿಯಾದಲ್ಲಿ. ಯುರೋಪ್‌ನಲ್ಲಿ ಉತ್ತಮ ಜೀವನ ನಡೆಸುವ ನಿರೀಕ್ಷೆಯಲ್ಲಿ ಮೆಡಿಟರೇನಿಯನ್ ಸಮುದ್ರವನ್ನು ದಾಟಲು ಪ್ರಯತ್ನಿಸಿ ಜೀವ ಕಳೆದುಕೊಂಡ ನತದೃಷ್ಟ ದೇಶಭ್ರಷ್ಟ ನಿರಾಶ್ರಿತರ ನೆನಪುಗಳನ್ನು ಈ ಸ್ಮಶಾನ ಪಿಸುಗುಟ್ಟುತ್ತಿರುವಂತಿದೆ. ಹೆಚ್ಚಿನ ಜನರ ಒತ್ತಡದಿಂದ ಉಂಟಾದ ದೋಣಿ ದುರಂತಗಳಲ್ಲಿ ಕೆಲ ನಿರಾಶ್ರಿತರು ಸಮುದ್ರದ ಪಾಲಾಗಿದ್ದರೆ, ಮತ್ತೆ ಕೆಲವರು ದರೋಡೆಕೋರರು ಹಾಗೂ ಉಗ್ರರ ದಾಳಿಗಳಿಗೆ ಬಲಿಯಾಗಿದ್ದಾರೆ. ಜೂನ್ 20ರ ‘ಅಂತರರಾಷ್ಟ್ರೀಯ ರೆಫ್ಯೂಜಿಗಳ ದಿನ’ದ ಸಂದರ್ಭದಲ್ಲಿ ಈ ಛಾಯಾಚಿತ್ರ ವರ್ತಮಾನದ ಬೃಹತ್ ಬಿಕ್ಕಟ್ಟೊಂದರ ಬಗ್ಗೆ ನಾಗರಿಕ ಸಮಾಜದ ಗಮನಸೆಳೆಯುವಂತಿದೆ. ಫೋಟೊ: ಎಎಫ್‌ಪಿ

